## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1109 |
| ಸದಸ್ಯರ ಹೆಸರು | : | ಡಾ: ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.09.2022. |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆಯ, ಹಾಸನ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ 9 ಗ್ರಾಮ ಪಂಚಾಯಿತಿಗಳು ಹಾಸನ ನಗರಸಭೆಗೆ ಸೇರ್ಪಡೆಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಗ್ರಾಮ ಪಂಚಾಯಿತಿಗಳಿಗೆ ಕಳೆದ 2 ವರ್ಷಗಳಿಂದ ತೆರಿಗೆ ವಿಧಿಸಲು ಅನುಸರಿಸುವ ಮಾನದಂಡಗಳು ಯಾವುವು; (ಪೂರ್ಣ ವಿವರ ನೀಡುವುದು) | ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 82 ಎಂ.ಎಲ್.ಆರ್. 2020, ದಿನಾಂಕ:31-12-2020 ರಲ್ಲಿ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ ಪ್ರಕರಣ 4 ಮತ್ತು 9 ರಂತೆ ಹಾಸನ ನಗರಸಭೆಗೆ ಹೊಂದಿಕೊಂಡಂತಿರುವ 1) ಸತ್ಯಮಂಗಲ, 2) ಹರಳಹಳ್ಳಿ, 3) ತೇಜೂರು, 4) ಟಿ. ಕಾಟಿಹಳ್ಳಿ, 5) ಭೂವನಹಳ್ಳಿ, 6) ಮಣಚನಹಳ್ಳಿ, 7) ಕಂದಲಿ, 8) ತಟ್ಟೆಕೆರೆ ಮತ್ತು 9) ಹನುಮಂತಪುರ ಗ್ರಾಮ ಪಂಚಾಯತಿಗಳ ಒಟ್ಟು 25 ಗ್ರಾಮಗಳ ಪ್ರದೇಶಗಳನ್ನು ಹಾಸನ ನಗರಸಭೆಯ ವ್ಯಾಪ್ತಿಗೆ ಸೇರ್ಪಡೆ ಮಾಡಲಾಗಿದೆ.<br><br>ಗ್ರಾಮ ಪಂಚಾಯತಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಂತೆ ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ತೆರಿಗೆಗಳನ್ನು ಅಥವಾ ಫೀಜುಗಳನ್ನು ವಿಧಿಸಬಹುದಾಗಿದೆ. |
| (ಆ) | ಪಂಚಾಯಿತಿಗಳು ಸಾರ್ವಜನಿಕರಿಗೆ ಆಸ್ತಿ ತೆರಿಗೆಯನ್ನು ಕಳೆದ 2 ವರ್ಷಗಳಿಂದ ಕಾನೂನು ಬಾಹಿರವಾಗಿ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಸಾರ್ವಜನಿಕರಿಗೆ ತೆರಿಗೆ ವಿಧಿಸಲು ಇರುವ ಸರ್ಕಾರದ ಮಾನದಂಡಗಳು ಯಾವುವು; ಈ ಮಾನದಂಡಗಳ ಅನುಸಾರ ತೆರಿಗೆ ವಿಧಿಸದಿರುವುದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ವಿವರ ನೀಡುವುದು) | ಬಂದಿಲ್ಲ.<br><br>ಆದಾಗ್ಯೂ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ರವರು ದಿನಾಂಕ:08-11-2021 ರ ಪತ್ರದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 82 ಎಂ.ಎಲ್.ಆರ್. 2020, ದಿನಾಂಕ:31-12-2020 ರಲ್ಲಿ ಹಾಸನ ನಗರಸಭೆಗೆ ಹೊಂದಿಕೊಂಡಂತಿರುವ 9 ಗ್ರಾಮ ಪಂಚಾಯತಿಗಳ ಒಟ್ಟು 25 ಗ್ರಾಮಗಳ ಪ್ರದೇಶಗಳನ್ನು ಹಾಸನ ನಗರಸಭೆಯ ವ್ಯಾಪ್ತಿಗೆ ಸೇರ್ಪಡೆ ಮಾಡಿರುವುದರಿಂದ ಹಾಸನ ನಗರಸಭೆಯ ಅಧಿಕಾರಗಳನ್ನು ಆಹ್ವಾನಿಸಿ, ಸ್ವತ್ತುಗಳನ್ನು ಹಸ್ತಾಂತರಿಸಲು ಕ್ರಮ ವಹಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹಾಸನ ಮತ್ತು ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ.<br><br>ಮುಂದುವರೆದು, ಹಾಸನ ನಗರಸಭಾ ವ್ಯಾಪ್ತಿಗೆ ಒಳಪಡಿಸಲಾಗಿರುವ 9 ಗ್ರಾಮ ಪಂಚಾಯತಿಗಳ 25 ಗ್ರಾಮಗಳಲ್ಲಿ ಯಾವುದೇ ಸ್ವತ್ತುಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ತೆರಿಗೆ ನಿರ್ಧರಣಾ ಪಟ್ಟಿ (ನಮೂನೆ-9, 11ಎ ಅಥವಾ 11ಬಿ) ಮತ್ತು ತೆರಿಗೆ ವಸೂಲಿ ಮಾಡತಕ್ಕದ್ದಲ್ಲವೆಂದು ತಿಳಿಸಲಾಗಿದೆ. |

| | | |
|---|---|---|
| (ಇ) | ಹಾಸನ ಜಿಲ್ಲೆಯ, ಹಾಸನ ತಾಲ್ಲೂಕು ಪಂಚಾಯಿತಿಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ತಮ್ಮದೇ ಆದ ನಿರ್ಣಯದ ಆದೇಶದಂತೆ ತೆರಿಗೆಯನ್ನು ಸಾರ್ವಜನಿಕರಿಗೆ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಇದುವರೆಗೂ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ವಿವರ ನೀಡುವುದು) | ಬಂದಿಲ್ಲ.<br><br>ಆದಾಗ್ಯೂ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ಮತ್ತು ಅನುಸೂಚಿ–IV ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ರಂತೆ ಗ್ರಾಮ ಪಂಚಾಯತಿಗಳು ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸಲು ಕ್ರಮ ವಹಿಸುತ್ತಿವೆ. |

ಸಂಖ್ಯೆ: ಗ್ರಾಅಪ 303 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.